

# ಶಿವಲಿಂಗ ಮತ್ತು ಜೇಮ್ಸ್ ಬಾಂಡ್!

ಬಾಂಡ್, ಜೇಮ್ಸ್ ಬಾಂಡ್! ಇದು 'ಶಿವಲಿಂಗ' ಚಿತ್ರದ ಟ್ರೇಲರ್‌ನಲ್ಲಿ ಶಿವರಾಜಕುಮಾರ್ ಅವರ ಪಾತ್ರದ ಬಗ್ಗೆ ಇರುವ ಬಣ್ಣನೆ. ಟ್ರೇಲರ್ ಮೇಲೆ ಸಿನಿಮಾದ ಕಥನವನ್ನು ಊಹಿಸುವುದಾದರೆ ಇದು ಹಾರರ್ ಥ್ರಿಲ್ಲರ್ ಕಥೆಯ ಚಿತ್ರವಾಗಿದ್ದು, ಪ್ರೇಕ್ಷಕರನ್ನು ಸೀಟಿನ ತುದಿಯಲ್ಲಿ ಕೂರಿಸುವ ನಿರೀಕ್ಷೆಯಿದೆ. ಪ್ರೇಕ್ಷಕರ ಕೌತುಕವನ್ನು ಹಿಡಿದಿಡಬಲ್ಲ ಸಿನಿಮಾಗಳನ್ನು ರೂಪಿಸುವಲ್ಲಿ ಜನಪ್ರಿಯರಾಗಿರುವ ನಿರ್ದೇಶಕ ಪಿ. ವಾಸು ನಿರ್ದೇಶನದ ಸಿನಿಮಾ ಇದೆನ್ನುವುದು ಕೂಡ 'ಶಿವಲಿಂಗ' ಬಗ್ಗೆ ನಿರೀಕ್ಷೆಗಳನ್ನು ಹೆಚ್ಚಿಸಿದೆ.

ಶಿವರಾಜ್ ಹಾಗೂ ವೇದಿಕಾ ಜೋಡಿಯಾಗಿ ನಟಿಸಿರುವ 'ಶಿವಲಿಂಗ' ಬಗ್ಗೆ ಪ್ರೇಕ್ಷಕರ ನಿರೀಕ್ಷೆ ಎಷ್ಟಿದೆಯೆಂದರೆ, ಚಿತ್ರದ ಅಧಿಕೃತ ಟ್ರೇಲರ್ ಬಿಡುಗಡೆ ಆಗುವ ಮೊದಲೇ ಯಾರೋ ಉತ್ಸಾಹಿಗಳ ಕೈಚಳಕದಿಂದ ಅದು ಅಂತರ್ಜಾಲದಲ್ಲಿ ಸೋರಿಕೆಯಾಗಿತ್ತು. ಇದರ ಬಗ್ಗೆ ನಿರ್ಮಾಪಕ ಕೆ.ಎ. ಸುರೇಶ್ ಅಸಮಾಧಾನ ವ್ಯಕ್ತಪಡಿಸಿದ್ದರು. ಚಿತ್ರದ ಪ್ರಥಮ ಪ್ರತಿ ಸಿದ್ಧಪಡಿಸಿಕೊಂಡು, ತೆರೆಕಾಣಿಸುವ ಪ್ರಯತ್ನದಲ್ಲಿರುವ ನಿರ್ಮಾಪಕರಿಗೆ ಟ್ರೇಲರ್ ಸೋರಿಕೆ ಸಹಜವಾಗಿಯೇ ಬೇಸರ ತರಿಸಿದೆ.

'ಶಿವಲಿಂಗ' ಚಿತ್ರದ ಬಿಡುಗಡೆ ಕೂಡ ನಿರ್ಮಾಪಕರ ಪಾಲಿಗೆ ಪ್ರಯಾಸವೆನ್ನಿಸಿದೆ. ಶಿವರಾಜ್ ನಟನೆಯ 'ಕಿಲ್ಲಿಂಗ್ ವೀರಪ್ಪನ್' ನವೆಂಬರ್‌ನಲ್ಲಿ ಹಾಗೂ 'ಶಿವಲಿಂಗ'ದ ಬಿಡುಗಡೆ ಡಿಸೆಂಬರ್‌ನಲ್ಲಿ ಎಂದು ಈ ಮೊದಲು ನಿರ್ಣಯಿಸಲಾಗಿತ್ತು. ಆದರೆ, ನಾನಾ ಕಾರಣಗಳಿಂದಾಗಿ ರಾಮ್‌ಗೋಪಾಲ್ ವರ್ಮಾ ನಿರ್ದೇಶನದ 'ಕಿಲ್ಲಿಂಗ್ ವೀರಪ್ಪನ್' ಬಿಡುಗಡೆ ಮುಂದಕ್ಕೆ ಹೋಗುತ್ತಲೇ ಬಂದಿದೆ. ವರ್ಮಾ ಅವರ ಚಿತ್ರ ಕೂಡ ಡಿಸೆಂಬರ್‌ನಲ್ಲೇ ಬಿಡುಗಡೆ ಆಗುವ ಸಾಧ್ಯತೆಯಿದೆ. ಹೀಗಾಗಿ, 'ಶಿವಲಿಂಗ' ಚಿತ್ರ ನಿಗದಿಯಾದಂತೆ ಡಿಸೆಂಬರ್‌ನಲ್ಲಿ ತೆರೆಗೆ ಬರುವುದೋ ಅಥವಾ ಮುಂದಕ್ಕೆ ಹೋಗುವುದೋ ಸ್ಪಷ್ಟವಾಗಿಲ್ಲ. ನಿರ್ಮಾಪಕರು ಮಾತ್ರ ತಮ್ಮ ಸಿನಿಮಾ ಡಿಸೆಂಬರ್‌ನಲ್ಲಿ ತೆರೆ ಕಾಣುವುದು ಖಚಿತ ಎನ್ನುತ್ತಿದ್ದಾರೆ.



# ರಥಬೀದಿಯಲ್ಲಿ 'ರೋರಿಂಗ್ ಸ್ಟಾರ್'

ರೋರಿಂಗ್ ಸ್ಟಾರ್! ಇದು ಪ್ರೇಕ್ಷಕರ ಮುಂದೆ ಬರುವ ತವಕದಲ್ಲಿರುವ 'ರಥಾವರ' ಸಿನಿಮಾದ ಮೂಲಕ ನಟ ಶ್ರೀಮುರಳಿ ಅವರಿಗೆ ದೊರೆಯುತ್ತಿರುವ ಬಿರುದು. 'ಉಗ್ರಂ' ಚಿತ್ರದಲ್ಲಿ ತಮ್ಮ ನೆಚ್ಚಿನ ನಟನ ಅಬ್ಬರವನ್ನು ಕಂಡು ಮೆಚ್ಚಿಕೊಂಡಿದ್ದ ಅಭಿಮಾನಿಗಳು 'ರೋರಿಂಗ್‌ಸ್ಟಾರ್' ಎಂದು ಮುರಳಿಯನ್ನು ಕರೆದಿದ್ದಾರಂತೆ. ಅಲ್ಲಿಗೆ, 'ರಥಾವರ' ಚಿತ್ರದಲ್ಲೂ ಉಗ್ರಾವತಾರ ಮುಂದುವರೆಯುವುದು ಖಚಿತ ಎಂದಾಯಿತು.

ಸಿನಿಮಾದ ಟ್ರೇಲರ್ ಹಾಗೂ ಹಾಡುಗಳ ತುಣುಕುಗಳನ್ನು ನೋಡಿದರೆ 'ಉಗ್ರಂ'ನ ಗಂಭೀರ ಛಾಯೆ 'ರಥಾವರ'ದಲ್ಲೂ ಮುಂದುವರಿದಂತಿದೆ. ಚಿತ್ರದ ಸಂಗೀತ ಹಾಗೂ ಸಂಭಾಷಣೆಗಳು ಮುರಳಿ ಅವರ ಜನಪ್ರಿಯತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಶಕ್ತಿಮದ್ದಾಗಿ ಪರಿಣಮಿಸುವ ಸಾಧ್ಯತೆಯಿದೆ. ನಾಯಕ ಮುರಳಿ ಒಂದು ಗೀತೆಯನ್ನು ಹಾಡುವ ಮೂಲಕ ಗಾಯಕರಾಗಿರುವುದು ಚಿತ್ರದ ಇನ್ನೊಂದು ವಿಶೇಷ.

ಚಂದ್ರಶೇಖರ್ ಬಂಡಿಯಪ್ಪ 'ರಥಾವರ'ದ ನಿರ್ದೇಶಕರು. ನೂರಕ್ಕೂ ಹೆಚ್ಚು ದಿನಗಳ ಕಾಲ ಚಿತ್ರೀಕರಣ ನಡೆಸಿರುವ ಅವರಿಗೆ, ಶ್ರೀಮುರಳಿ ನೀಡಿದ ಸಹಕಾರದ ಬಗ್ಗೆ ಧನ್ಯತಾಭಾವವಿದೆ.

ಗುಳಿಕೆನ್ನೆಯ ಚೆಲುವೆ ರಚಿತಾರಾಮ್ ಚಿತ್ರದ ನಾಯಕಿ. ತಮ್ಮ ವೃತ್ತಿಜೀವನದಲ್ಲಿ ಮೊದಲ ಬಾರಿಗೆ ಪ್ರಯೋಗಾತ್ಮಕ ಪಾತ್ರವೊಂದು ಸಿಕ್ಕಿದೆ ಎನ್ನುವ ಖುಷಿ ಅವರದು. ರವಿಶಂಕರ್, ಸಾಧುಕೋಕಿಲ, ಮುಂತಾದವರು ತಾರಾಗಣದಲ್ಲಿರುವ 'ರಥಾವರ' ಡಿಸೆಂಬರ್ 4ರಂದು ತೆರೆ ಕಾಣುತ್ತಿದೆ.

■ ರಘು